ಸ್ಥಳ ಪರಿಶೀಲನೆ ನಡೆಸಿದ್ದು, ಈ ಯೋಜನೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಲು ಸೂಚಿಸಿದ್ದು, ಅದರಂತೆಯೇ ಕೆಲವೊಂದು ಬದಲಾವಣೆಗಳನ್ನು ಮಾಡಲಾಗಿದೆ. ಈ ಬದಲಾವಣೆಗಳಿಗೆ ನಬಾರ್ಡ್ ಸಂಸ್ಥೆಯಿಂದ ಮಂಜೂರಾತಿ ದೊರಕಿದ ನಂತರ ಅನುದಾನದ ಲಭ್ಯತೆಗನುಗುಣವಾಗಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

427 (747) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಮೂಡಬಿದ್ರೆಯು ಅತೀ ವೇಗವಾಗಿ ಬೆಳೆಯುತ್ತಿರುವ ಪಟ್ಟಣವಾಗಿದ್ದು ಯು.ಜಿ.ಡಿ ಸ್ಕೀಮಿನ ಅನುಷ್ಠಾನದ ಬಗ್ಗೆ ಅನೇಕ ಬಾರಿ ಕೋರಿದ್ದರೂ ಈ ತನಕ ಮಂಜೂರು ಮಾಡದಿರಲು ಕಾರಣವೇನು;

ಆ. ಮಂಜೂರು ಮಾಡಲಾಗುವುದು ಯಾವಾಗ;

ಇ. ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು):

ಅ. ಸದರಿ ಪ್ರಸ್ತಾವನೆಯನ್ನು ಶ್ರವಣಬೆಳಗೊಳದಲ್ಲಿ ನಡೆದ ಮಹಾಮಸ್ತಕಾಭಿಷೇಕದ ಅನುದಾನದಲ್ಲಿ ಕೈಗೊಳ್ಳಬೇಕಾಗಿರುವುದರಿಂದ ಕಡತ ಸಂಖ್ಯೆ: ನಅಇ 16 ಯುಡಬ್ಲ್ಯೂಎಸ್ 2006 ಕಡತವನ್ನು ಕಂದಾಯ ಇಲಾಖೆಯ ಸಹಮತಿಗಾಗಿ ದಿನಾಂಕ 10.3.2005ರಂದು ಕಳುಹಿಸಲಾಗಿದೆ.

ಆ. ಕಂದಾಯ ಇಲಾಖೆಯ ಸಹಮತಿ ದೊರೆತ ನಂತರ ಮಂಜೂರು ಮಾಡಲಾಗುವುದು.

ಇ. ಉದ್ಭವಿಸುವುದಿಲ್ಲ.

428 (748) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಮೂಡಬಿದ್ರೆ ಪುರಸಭೆಯ ಕುಡಿಯುವ ನೀರಿನ ಯೋಜನೆ ಪೂರ್ಣಗೊಂಡಿದ್ದು ಓವರ್‌ಹೆಡ್ ಟ್ಯಾಂಕ್‌ಗಳ ಕೊರತೆಯಿಂದಾಗಿ ಮೂಡಬಿದ್ರಿ ನಗರಕ್ಕೆ ಸಮರ್ಪಕವಾಗಿ ನೀರು ಸರಬರಾಜು ಮಾಡಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಬಂದಿದ್ದಲ್ಲಿ, ಈ ಓವರ್ ಹೆಡ್ ಟ್ಯಾಂಕ್‌ಗಳನ್ನು ಯಾವಾಗ ನಿರ್ಮಿಸಲಾಗುವುದು ಮತ್ತು ನೀರನ್ನು ಎಂದಿನಿಂದ ಒದಗಿಸಲಾಗುವುದು;

ಇ. ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು; (ಪೂರ್ಣ ವಿವರಗಳನ್ನು ಒದಗಿಸುವುದು)?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು):

ಅ. ಬಂದಿದೆ

ಅ. ಸದರಿ ಪ್ರಸ್ತಾವನೆಯನ್ನು ಶ್ರವಣಬೆಳಗೊಳದಲ್ಲಿ ನಡೆದ ಮಹಾಮಸ್ತಕಾಭಿಷೇಕದ ಅನುದಾನದಲ್ಲಿ ಕೈಗೊಳ್ಳಬೇಕಾಗಿರುವುದರಿಂದ ಕಡತ ಸಂಖ್ಯೆ: ನಅಇ 16 ಯುಡಬ್ಲ್ಯೂಎಸ್ 2006 ಕಡತವನ್ನು ಕಂದಾಯ ಇಲಾಖೆಯ ಸಹಮತಿಗಾಗಿ ದಿನಾಂಕ 10.3.2005ರಂದು ಕಳುಹಿಸಲಾಗಿದೆ.

ಇ. ಕಂದಾಯ ಇಲಾಖೆಯ ಸಹಮತಿ ದೊರೆತ ಕೂಡಲೇ ಮಂಜೂರಾತಿಯ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

429 (749) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯವರು ಮೂಲ್ಕಿ ನಗರ ಪಂಚಾಯತ್‌ಗೆ ಕುಡಿಯುವ ನೀರಿನ 4.50 ಕೋಟಿ ಯೋಜನೆಯ ಪೈಪ್ ಲೈನ್ ಅಳವಡಿಸಿದ್ದು ಈ ತನಕ ನೀರು ಸರಬರಾಜು ಪ್ರಾರಂಭಿಸದಿರಲು ಕಾರಣವೇನು;

ಆ. ನೀರು ಸರಬರಾಜನ್ನು ಎಂದಿನಿಂದ ಪ್ರಾರಂಭಿಸಲಾಗುವುದು;

ಇ. ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು (ಸಂಪೂರ್ಣ ವಿವರಗಳನ್ನು ಒದಗಿಸುವುದು)?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು):

ಅ. ಮೂಲ್ಕಿ ಪಟ್ಟಣದ ಪೈಪ್‌ಲೈನ್‌ಗೆ ಮಂಗಳೂರು ನೀರು ಸರಬರಾಜು ವ್ಯವಸ್ಥೆಯಿಂದ ನೀರನ್ನು ಹರಿಸಬೇಕಾಗಿದ್ದು, ಆದರೆ ಮಂಗಳೂರು ನಗರ ಪಾಲಿಕೆಯವರು ನೀರನ್ನು ಒದಗಿಸಲು ಒಪ್ಪಿಗೆ ನೀಡಿಲ್ಲವಾದ್ದರಿಂದ ನೀರು ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ.

ಆ. ಮಂಗಳೂರು ಮಹಾನಗರ ಪಾಲಿಕೆಯವರು ನೀರನ್ನು ಒದಗಿಸಿದ ಕೂಡಲೇ ನೀರು ಸರಬರಾಜು ಮಾಡಲಾಗುವುದು.

ಇ. ದಿನಾಂಕ:30.5.2006ರಲ್ಲಿ ನೀರನ್ನು ಒದಗಿಸುವಂತೆ ಮಂಗಳೂರು ಮಹಾನಗರ ಪಾಲಿಕೆಯನ್ನು ಕೋರಲಾಗಿದೆ ಹಾಗೂ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾರ್ಯಪಾಲಕ ಅಭಿಯಂತರರು ಮಂಗಳೂರು ಮಹಾನಗರ ಪಾಲಿಕೆಗೆ ಖುದ್ದಾಗಿ ಭೇಟಿ ಮಾಡಿ ನೀರು ಬಿಡಲು ಒತ್ತಾಯಿಸಲಾಗಿದೆ ಹಾಗೂ ಈ ಬಗ್ಗೆ ಕೆ.ಡಿ.ಪಿ ಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸಿ ನೀರನ್ನು ಬಿಡಲು ಸೂಚಿಸಲಾಗಿದೆ.

430 (755) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ತೀರ್ಥಹಳ್ಳಿಯಲ್ಲಿ ಶಾಂತವೇರಿ ಗೋಪಾಲಗೌಡರ ಸ್ಮಾರಕ ನಿರ್ಮಿಸುತ್ತಿರುವ ರಂಗಮಂದಿರ ಕಾಮಗಾರಿ ಪೂರ್ಣಗೊಳ್ಳಲು ಇನ್ನೂ ಅಗತ್ಯವಿರುವ ಸುಮಾರು 65 ಲಕ್ಷ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡುವುದೇ;

ಆ) ಈವರೆಗೆ ಸರ್ಕಾರದಿಂದ ಈ ರಂಗಮಂದಿರಕ್ಕೆ ಬಿಡುಗಡೆಯಾದ ಹಣ ಎಷ್ಟು;